**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ. ಎನ್. ಮಂಜೇಗೌಡ ರವರು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಪ್ರಶ್ನೆ :-** ಕರ್ನಾಟಕ ಮುಜರಾಯಿ ಇಲಾಖೆಗೆ ಒಳಪಡುವ 'ಸಿ' ಪ್ರವರ್ಗದ ಗ್ರಾಮೀಣ ಹಾಗೂ ಹಳ್ಳಿಗಾಡು ಪ್ರದೇಶದ ದೇವಾಲಯಗಳಲ್ಲಿ ಅರ್ಚಕರಾಗಿ ಸೇವೆ ಸಲ್ಲಿಸುತ್ತಿರುವ ಅರ್ಚಕರುಗಳಿಗೆ ಅವರ ವಯೋ ಸಹಜ ಅಥವಾ ನಿಧನರಾದ ನಂತರ ಅವರು ಸೇವೆ ಸಲ್ಲಿಸುತ್ತಿರುವ ದೇವಸ್ಥಾನಗಳಿಗೆ ಅವರ ಮಕ್ಕಳು ಆಯಾಯಾ ದೇವಸ್ಥಾನದ ಪದ್ಧತಿಯಂತೆ ಆಗಮ ಶಾಸ್ತ್ರ ಅನುಗುಣವಾಗಿ ಆಗಮ ಪಾಂಡಿತ್ಯವನ್ನು ಪಡೆದು ತಂದೆಯ ತಂದೆಯ ಜೊತೆಯಲ್ಲಿ ಅರ್ಚನಾ ವೃತ್ತಿಯನ್ನು ಮಾಡುತ್ತಿದ್ದಾರೆ ಅಥವಾ ದೇವಾಲಯದ ಪರಂಪರೆಯಲ್ಲಿ ಮೂರು ವರ್ಷಗಳ ಕಾಲ ಸೇವೆಯನ್ನು ಸಲ್ಲಿಸುತ್ತಿದ್ದರೆ ಅಂತಹ ಅರ್ಚಕರನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ 10/1 ರ ನಿಯಮದ ಪ್ರಕಾರ ಅರ್ಚಕರನ್ನಾಗಿ ನೇಮಿಸಲು ಸ್ಪಷ್ಟಪಡಿಸಲಾಗಿರುತ್ತದೆ. ಇದರನ್ವಯ ಉಪ ವಿಭಾಗಾಧಿಕಾರಿಗಳು ಅಥವಾ ತಹಶೀಲ್ದಾರ್ ರವರಿಗೆ ಸೂಕ್ತ ಅಧಿಕಾರ ನೀಡಬೇಕಾಗಿರುವುದರಿಂದ ಈ ವಿಷಯವನ್ನು ಮಾನ್ಯ ಮುಜರಾಯಿ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

* * * * * * *

**ಉತ್ತರ :-**

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಲಂ 10(1)ರಲ್ಲಿ ಈ ಕೆಳಕಂಡಂತೆ ಸ್ಪಷ್ಟ ಪಡಿಸಲಾಗಿರುತ್ತದೆ.

**"ಯಾವೊಬ್ಬ ವ್ಯಕ್ತಿಯು ಮನ್ನಣೆ ಪಡೆದ ಯಾವುದೇ ಸಂಸ್ಕೃತ ಪಾಠಶಾಲೆಯಿಂದ ಅಥವಾ ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ನಿರ್ದಿಷ್ಟ ಪಡಿಸಬಹುದಾದ ಇತರ ಯಾವುದೇ ಸಂಸ್ಥೆಯಿಂದ ದೇವಸ್ಥಾನದ ಪರಂಪರೆಯ ಆಗಮದಲ್ಲಿ ಕನಿಷ್ಠ ಪಕ್ಷ ಸರ್ಟಿಫಿಕೇಟ್ ಕೋರ್ಸ್ ನಲ್ಲಿ (ಪ್ರವರ) ಉತ್ತೀರ್ಣರಾದ ಹೊರತು ಅಥವಾ ದೇವಾಲಯದ ಪರಂಪರೆಯಲ್ಲಿ ಕೊನೆಯಪಕ್ಷ 03 ವರ್ಷಗಳ ಕಾಲ ಅರ್ಚಕರಾಗಿ ಸೇವೆ ಸಲ್ಲಿಸಿದ ಹೊರತು ಅವನನ್ನು ನೇಮಕ ಮಾಡತಕ್ಕದ್ದಲ್ಲ"**ಎಂದಿರುತ್ತದೆ.

ಅದರಂತೆ ಸರ್ಕಾರದ ಆದೇಶ ಸಂ: ಕಂಇ 31 ಮುಸೇವಿ 2021 ದಿನಾಂಕ: 21.08.2021 ರಲ್ಲಿ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ 'ಸಿ' ವರ್ಗಗಳ ದೇವಾಲಯಗಳಲ್ಲಿ ವಂಶಪಾರಂಪರ್ಯ ಅರ್ಚಕರ ಹುದ್ದೆಯ ಬರಾಬರ್ದನ್ನು ವರ್ಗಾಯಿಸಲು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಾಯ್ದೆಯ ಕಲಂ 9(1)ರಿಂದ ವಿನಾಯ್ತಿ ನೀಡಿ ವಂಶಪಾರಂಪರ್ಯವಾಗಿ ಪೂಜಾ ಕೈಂಕರ್ಯಗಳನ್ನು ನಿರ್ವಹಿಸಿಕೊಂಡು ಅರ್ಚಕರ ನಿಧನರಾದ ನಂತರ ಅವರ ಮಕ್ಕಳಿಗೆ ತಹಶೀಲ್ದಾರ್ ರವರ ಹಂತದಲ್ಲಿ ವರ್ಗಾವಣೆ ಮಾಡಲು ಅಧಿಕಾರ ಪ್ರತ್ಯಾಯೋಜನೆ ಮಾಡಿ ಆದೇಶಿಸಲಾಗಿರುತ್ತದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಕಂಇ 31 ಮುಸೇವಿ 2021 ದಿನಾಂಕ: 28.11.2023ರಲ್ಲಿ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಸಿ ವರ್ಗದ ದೇವಾಲಯಗಳಲ್ಲಿ ವಂಶಪಾರಂಪರ್ಯವಾಗಿ ಪೂಜಾ ಕೈಂಕರ್ಯಗಳನ್ನು ನಿರ್ವಹಿಸಿಕೊಂಡು

......2

ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ಅರ್ಚಕರ ನಿಧನ/ ಅರ್ಚಕರು ವಯಸ್ಸಾದ ಸಂದರ್ಭಗಳಲ್ಲಿ / ತೀವ್ರ ರೀತಿಯ ಅನಾರೋಗ್ಯದ ನಿಮಿತ್ತ ಅರ್ಚಕರಾಗಿ ಕಾರ್ಯ ನಿರ್ವಹಿಸಲು ಆಗದೇ ಇರುವ ಸಂದರ್ಭಗಳಲ್ಲಿಯೂ ಸಹ ಅವರ ಅನುವಂಶಿಕ ಹಕ್ಕನ್ನು ಕಾನೂನುಬದ್ಧ ವಾರಸುದಾರರಿಗೆ ವರ್ಗಾಯಿಸಲು ಅವಕಾಶ ಕಲ್ಪಿಸುವ ಸಲುವಾಗಿ ವಂಶಪಾರಂಪರ್ಯ ಅರ್ಚಕರ ಹುದ್ದೆಯ ಬರಾಬರ್ದನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಾಯ್ದೆಯ ಕಲಂ 9(1)ರಿಂದ ವಿನಾಯ್ತಿ ನೀಡಿ ಕಾನೂನುಬದ್ಧ ವಾರಸುದಾರರಿಗೆ ವರ್ಗಾಯಿಸಲು ತಹಶೀಲ್ದಾರ್ ರವರಿಗೆ ಅಧಿಕಾರವನ್ನು ಪ್ರತ್ಯಾಯೋಜನೆ ಮಾಡಿ ಆದೇಶಿಸಲಾಗಿರುತ್ತದೆ.

ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಸಿ ವರ್ಗದ ಸಂಸ್ಥೆಗಳ ಅರ್ಚಕರಿಗೆ ಅನುವಂಶಿಕ (ವಂಶಪಾರಂಪರ್ಯ) ಪ್ರಕರಣಗಳನ್ನು ಹೊರತುಪಡಿಸಿ, ತಂದೆಯ ನಿವೃತ್ತಿ ನಂತರ ಅವರ ಮಕ್ಕಳಿಗೆ ಅರ್ಚಕರ ಹುದ್ದೆಗೆ ನೇಮಕಾತಿ ಮಾಡಲು ಕಾಯ್ದೆ / ನಿಯಮಗಳಲ್ಲಿ ಅವಕಾಶವನ್ನು ಕಲ್ಪಿಸಿರುವುದಿಲ್ಲ.

ಆದ್ದರಿಂದ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002ರ ನಿಯಮ 12ರಲ್ಲಿ ದೇವಾಲಯದ ನೌಕರರು ಮತ್ತು ಅರ್ಚಕರ ನೇಮಕಾತಿಗಾಗಿ ಆಯುಕ್ತರಿಗೆ ಅಧಿಕಾರ ಪ್ರತ್ಯಾಯೋಜಿಸಿ ಅವಕಾಶವನ್ನು ಕಲ್ಪಿಸಲಾಗಿದ್ದು, ಅದರಂತೆ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002ರ ನಿಯಮ 12ರಲ್ಲಿ ಸಕ್ಷಮ ಪ್ರಾಧಿಕಾರವು ಆಯುಕ್ತರು ಎಂದಿರುವ ಪದವನ್ನು ಉಪ ವಿಭಾಗಾಧಿಕಾರಿಗಳು ಎಂದು ನಿಯಮಗಳಲ್ಲಿ ತಿದ್ದುಪಡಿ ಮಾಡಲು ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿರುತ್ತದೆ.

ಸಂಖ್ಯೆ:ಕಂಇ 25 ಮುಸಪ್ರ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.